

# ಹರಿಪ್ರಿಯಾಗೆ ಪ್ರಶಸ್ತಿಯ ಗರಿ

‘ನೀರ್ ದೋಸೆ’ ಸಿನಿಮಾದಲ್ಲಿ ಗ್ಲ್ಯಾಮರ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದ ಹರಿಪ್ರಿಯಾ ಅದರ ನಂತರ ತಮ್ಮ ನಟನಾಪಥವನ್ನು ತುಸು ಬದಲಿಸಿ ಪ್ರಯೋಗಮುಖಿಯಾಗಿದ್ದರು. ಇತ್ತೀಚೆಗಂತೂ ಅವರು ಆಫ್ ಬೀಟ್ ಸಿನಿಮಾಗಳ ಕಡೆಗೂ ವಿಶೇಷ ಒಲವು ತೋರಿಸಲು ಶುರುಮಾಡಿದ್ದಾರೆ. ಮೌನೇಶ ಬಡಿಗೇರ ನಿರ್ದೇಶನದ ‘ಸೂಜಿದಾರ’, ಬರಗೂರು ರಾಮಚಂದ್ರಪ್ಪ ನಿರ್ದೇಶನದ ‘ಅಮೃತಮತಿ’ಯಂಥ ಸಿನಿಮಾಗಳಲ್ಲಿ ನಟಿಸಿರುವುದೇ ಅವರ ಅಭಿನಯಪ್ರಧಾನ ಪಾತ್ರಗಳ ಹಸಿವಿಗೆ ಸಾಕ್ಷಿ.

ಹರಿಪ್ರಿಯಾ ಅವರ ಈ ನಿರ್ಧಾರಕ್ಕೆ ಈಗ ಪ್ರಶಸ್ತಿಯ ಗರಿಯೂ ಮೂಡಿದೆ. ಹೌದು, ನೋಯಿಡಾದಲ್ಲಿ ಇತ್ತೀಚೆಗೆ ನಡೆದ, ನಾಲ್ಕನೆಯ ಭಾರತೀಯ ವಿಶ್ವ ಸಿನಿಮೋತ್ಸವದಲ್ಲಿ, ‘ಅಮೃತಮತಿ’ ಚಿತ್ರದಲ್ಲಿನ ಪಾತ್ರಕ್ಕಾಗಿ ಹರಿಪ್ರಿಯಾ ಅವರಿಗೆ ಶ್ರೇಷ್ಠ ನಟಿ ಪ್ರಶಸ್ತಿ ಸಿಕ್ಕಿದೆ.

‘ಜಗತ್ತಿನ ಸಿನಿಮಾಗಳ ಜೊತೆಗೆ ಸ್ಪರ್ಧಿಸಿ ಶ್ರೇಷ್ಠ ನಟಿ ಪ್ರಶಸ್ತಿ ಪಡೆದಿರುವುದು ನಿಜಕ್ಕೂ ತುಂಬ ಖುಷಿಕೊಟ್ಟಿದೆ. ಅದರಲ್ಲಿಯೂ ಮಾರ್ಚ್ 8 ಮಹಿಳಾ ದಿನಾಚರಣೆಯ ದಿನವೇ ಈ ಪ್ರಶಸ್ತಿ ಪ್ರಕಟವಾಗಿರುವುದು ಖುಷಿಯನ್ನು ಇನ್ನಷ್ಟು ಹೆಚ್ಚಿಸಿದೆ. ನನ್ನ ಮೇಲೆ ನಂಬಿಕೆ ಇಟ್ಟು ಅವಕಾಶ ಕೊಟ್ಟಿರುವ ನಿರ್ದೇಶಕ ಬರಗೂರು ರಾಮಚಂದ್ರಪ್ಪ ಅವರಿಗೆ ಥ್ಯಾಂಕ್ಸ್ ಹೇಳಲೇಬೇಕು. ಈ ಪ್ರಶಸ್ತಿಯನ್ನು ನನ್ನ ಅಮ್ಮನಿಗೆ ಅರ್ಪಿಸುತ್ತಿದ್ದೇನೆ’ ಎಂದು ಹರಿಪ್ರಿಯಾ ಹೇಳಿಕೊಂಡಿದ್ದಾರೆ.

13ನೇ ಶತಮಾನದ ಜನ್ನ ಕವಿಯ ‘ಯಶೋಧರ ಚರಿತೆ’ ಕಾವ್ಯವನ್ನು ಆಧರಿಸಿದ ‘ಅಮೃತಮತಿ’ ಚಿತ್ರದಲ್ಲಿ ಕಿಶೋರ್, ಸುಂದರ್‌ರಾಜ್, ಪ್ರಮೀಳಾ ಜೋಷಾಯ್, ಸುಪ್ರಿಯಾ ರಾವ್, ವತ್ಸಲಾ ಮೋಹನ್ ಮುಂತಾದವರು ನಟಿಸಿದ್ದಾರೆ. ‘ಇಂಚರ ಪುಟ್ಟಣ್ಣ ಪ್ರೊಡಕ್ಷನ್ ಸಂಸ್ಥೆಯಿಂದ ನಿರ್ಮಾಣವಾಗಿರುವ ಈ ಚಿತ್ರ ಚಿತ್ರಮಂದಿರಗಳಿಗೆ ಬರಲು ಸಜ್ಜಾಗಿದೆ. ■

# ಕಿರಣ್ ಡೈರೆಕ್ಷನ್, ಹಿತಾ ಆ್ಯಕ್ಟಿಂಗ್!



ಕೆಲವು ತಿಂಗಳುಗಳ ಹಿಂದೆ ಮದುವೆಯಾಗಿದ್ದ ಕಿರಣ್ ಶ್ರೀನಿವಾಸ್ ಮತ್ತು ಹಿತಾ ಚಂದ್ರಶೇಖರ್ ಮಧುಚಂದ್ರದ ಗುಂಗಿನಿಂದ ಬಹುಬೇಗನೇ ಹೊರಬಂದಿದ್ದಾರೆ. ಅಲ್ಲದೆ ಬಣ್ಣ ಹಚ್ಚಿಕೊಂಡು ಕ್ಯಾಮೆರಾ ಮುಂದೂ ಹಾಜರಾಗಿದ್ದಾರೆ. ವಿಶೇಷ ಇಷ್ಟಕ್ಕೆ ಮುಗಿಯಲಿಲ್ಲ. ಕಿರಣ್ ಶ್ರೀನಿವಾಸ್ ತಮ್ಮ ಪಾತ್ರವನ್ನು ತುಸು ಬದಲಿಸಿಕೊಂಡಿದ್ದಾರೆ. ತೆರೆಯ ಮೇಲಲ್ಲ; ತೆರೆಯ ಹಿಂದೆ!

ನಟನೆಗೆ ತುಸು ಬ್ರೇಕ್ ಕೊಟ್ಟು ಒಂದು ಕಿರುಚಿತ್ರವನ್ನು ನಿರ್ದೇಶಿಸುವ ಕೆಲಸಕ್ಕೆ ಅವರು ಕೈ ಹಾಕಿದ್ದಾರೆ. ಸಂಗಾತಿಯ ಈ ಸಾಹಸಕ್ಕೆ ಹಿತಾ, ಮುಖ್ಯಪಾತ್ರದಲ್ಲಿ ನಟಿಸುವುದರ ಮೂಲಕ ಬೆಂಬಲ ಕೊಟ್ಟಿದ್ದಾರೆ. ಹದಿನೈದು ನಿಮಿಷದ ಈ ಕಿರುಚಿತ್ರ ಸೈಕಲಾಜಿಕಲ್ ಥ್ರಿಲ್ಲರ್ ಕಥೆಯನ್ನು ಹೊಂದಿದೆಯಂತೆ.

ಈ ಹಿಂದೆ ಐಶಾನಿ ಶೆಟ್ಟಿ ನಿರ್ದೇಶನದ ‘ಕಾಜಿ’ ಕಿರುಚಿತ್ರದಲ್ಲಿ ಹಿತಾ ಮುಖ್ಯಪಾತ್ರದಲ್ಲಿ ನಟಿಸಿದ್ದರು. ಆ ಪಾತ್ರಕ್ಕೆ ಸಾಕಷ್ಟು ಮೆಚ್ಚುಗೆ ದೊರಕಿತ್ತಲ್ಲದೆ ಹಲವು ಕಿರುಚಿತ್ರೋತ್ಸವಗಳಲ್ಲಿ ಪ್ರಶಸ್ತಿಯನ್ನೂ ಮುಡಿಗೇರಿಸಿಕೊಂಡಿತ್ತು. ಈಗ ಮತ್ತೊಂದು ಕಿರುಚಿತ್ರದ ಭಾಗವಾಗಿರುವ ಉಮೇದಿನಲ್ಲಿ ಹಿತಾ ಇದ್ದಾರೆ.

ನಿರ್ದೇಶನ, ಕಿರಣ್ ಒಮ್ಮಿಂದೊಮ್ಮೆಲೇ ಕೈಗೊಂಡ ನಿರ್ಧಾರವೇನಲ್ಲ. ಕಳೆದ ನಾಲ್ಕು ವರ್ಷಗಳಿಂದ ಅವರಿಗೆ ನಿರ್ದೇಶಕನ ಕ್ಯಾಪ್ ತೊಟ್ಟು ನೋಡಬೇಕು ಎಂಬ ಹಂಬಲ ಇತ್ತಂತೆ. ಈಗ ಆ ಗಳಿಗೆ ಕೂಡಿಬಂದಿದೆ ಅಷ್ಟೆ.

ಈಗಾಗಲೇ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಆದರೆ ಕಿರುಚಿತ್ರದ ಶೀರ್ಷಿಕೆ ಉಳಿದ ತಾರಾಗಣದ ಮಾಹಿತಿಯನ್ನು ತಂಡ ಗುಟ್ಟಾಗಿಯೇ ಉಳಿಸಿದೆ. ಇನ್ನೋರ್ವ ಜನಪ್ರಿಯ ನಟನೂ ಈ ಚಿತ್ರದಲ್ಲಿ ನಟಿಸಿದ್ದಾನೆ ಎಂಬ ಸುದ್ದಿಯೂ ಹರಿದಾಡುತ್ತಿದೆ. ಆ ಎಲ್ಲ ವಿವರಗಳನ್ನೂ ಚಿತ್ರತಂಡ ಸದ್ಯದಲ್ಲಿಯೇ ಬಿಡುಗಡೆ ಮಾಡಲಿದೆಯಂತೆ. ■